ಪ್ರಾಸಾ-3 ರವರನ್ನು ಪುನಃ ಕರೆಸಿ ಪ್ರಮಾಣ
ವಚನ ಬೋಧಿಸಲಾಯಿತು.
ದಿನಾಂಕಃ 27.03.2017

ಮುಂದುವರೆದ ಮುಖ್ಯ ವಿಚಾರಣೆ ಃ ಸ್ಪೆಷಲ್.ಪಿ.ಪಿ.ರವರಿಂದಃ ಸರ್ಕಾರದ ಪರ

ಎನ್.ಎಸ್. ಮೆಡಿಕಲ್ ಶಾಪ್‌ನಲ್ಲಿ ಒಂದು ಸಿ.ಡಿ.ಯನ್ನು ಅಮಾನತ್ತುಪಡಿಸಿಕೊಂಡರು. ಆ ಸಿ.ಡಿ. ನೋಡಿದರೆ ಗುರುತಿಸುತ್ತೇನೆ. ಈಗ ನೀವು ತೋರಿಸಿದ ಸಿ.ಡಿ. ಕವರ್‌ನಲ್ಲಿರುವ ಒಂದು ಸಿ.ಡಿ. ಗುರುತಿಸಿದೆ. ಇದನ್ನು ಎಂ.ಒ.7 ಎಂದು ಗುರ್ತಿಸಿದೆ. ಈ ಎಂ.ಒ.7ನ್ನು ನಿಪಿ-8ರ ಮಹಜರ್‌ನಡಿ ಅಮಾನತ್ತುಪಡಿಸಿಕೊಂಡಿದ್ದಾರೆ. ಈಗ ತೋರಿಸಿದ ನಿಪಿ-10(ಬಿ) ಶ್ರೀ ಸಾಯಿ ಟ್ರ್ಯಾನ್ಸ್‌ಪೋರ್ಟ್ ಮತ್ತು ಕೊರಿಯರ್ ಪ್ರೈವೇಟ್ ಲಿಮಿಟೆಡ್‌ನ ರಶೀದಿ ಇದೆ. ಇದನ್ನು ಪೂರ್ಣೇಶ 1ನೇ ಆರೋಪಿಯ ಕೋರಿಕೆ ಮೇರೆಗೆ ಹಾಜರುಪಡಿಸಿದ. 1ನೇ ಆರೋಪಿ ಆ ವೇಳೆಗೆ ಹಾಜರಿದ್ದರು. ಈಗ ತೋರಿಸಿದ ಇನ್ನೊಂದು ರಶೀದಿ ನಿಪಿ-10(ಎ)ದ ಇನ್ನೊಂದು ಪ್ರತಿ ಇದೆ, ಇದನ್ನು ನಿಪಿ-10(ಸಿ) ಅಂತ ಗುರ್ತಿಸಿದೆ. ಈಗ ನೀವು ತೋರಿಸಿದ ವಿಆರ್‌ಎಲ್ ಕನ್‌ಸೈನ್‌ಮೆಂಟ್ ಕಾಪಿಯನ್ನು ವೆಂಕಟೇಶ್‌ರವರು ವಿಆರ್‌ಎಲ್ ಕಛೇರಿಯಲ್ಲಿ ಹಾಜರುಪಡಿಸಿದರು, ಇದನ್ನು ಗುರ್ತಿಸಿದೆ, ಇದನ್ನು ನಿಪ-9ರಡಿ ಅಮಾನತ್ತುಪಡಿಸಿಕೊಂಡಿದ್ದು ಇದು ನಿಪಿ-9(ಸಿ) ಇದೆ. ಈ ಮೂರೂ ಮಹಜರ್‌ಗಳನ್ನು ಬೆಳಿಗ್ಗೆ 9.00 ರಿಂದ ಮದ್ಯಾಹ್ನ 12.30ರವರೆಗೂ ಮಾಡಿದರು. ಮೊದಲನೇ ಮಹಜರ್‌ನ್ನು ಎನ್‌ಎಸ್ ಮೆಡಿಕಲ್ಸ್‌ನಲ್ಲಿ, ಎರಡನೇ ಮಹಜರನ್ನು ಹಳೇಸಂತೆ ವಿಆರ್‌ಎಲ್ ಕಛೇರಿಯಲ್ಲಿ ಮತ್ತು ಮೂರನೇ ಮಹಜರ್‌ನ್ ಕೆಎಸ್‌ಆರ್‌ಟಿಸಿ ಬಸ್‌ನಿಲ್ದಾಣದಲ್ಲಿರುವ ಸಾಯಿ ಟ್ರ್ಯಾನ್ಸ್‌ಪೋರ್ಟ್ ಕಛೇರಿಯಲ್ಲಿ ಮಾಡಿದರು. ಈ ಎಲ್ಲ ಮಹಜರ್‌ಗಳಲ್ಲಿ ಬರೆದ ಸಂಗತಿಗಳನ್ನು ತಿಳಿದು ನಾನು ನನ್ನ ಸಹಿ ಮಾಡಿದ್ದೇನೆ.

ಪಾಟೀಸವಾಲುಃ ಶ್ರೀ ಜೆ.ಎಸ್. ವಕೀಲರಿಂದಃ 2ನೇ ಆಪಾದಿತರ ಪರಃ

ಇರುವುದಿಲ್ಲ ಎಂದು ಮಂಡಿಸುತ್ತಾರೆ.

ಪಾಟೀಸವಾಲುಃ ಶ್ರೀ ಎ.ಎಚ್.ಬಿ. ವಕೀಲರಿಂದಃ 1ನೇ ಆಪಾದಿತರ ಪರಃ

ವೇಳೆ ಕೋರುವ ಕಾರಣ ಸಾಕ್ಷ್ಯ ದಾಖಲಿಸುವಿಕೆ ಮುಂದೂಡಲಾಗಿದೆ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಅವರು ಹೇಳಿದಂತೆ ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ಹಾಗೂ
ಸ್ಪೆಷಲ್ ನ್ಯಾಯಾಧೀಶರು, ಹಾಸನ.